# ಹಿಂದಿಲ್ಲಾ ಸ್ವಾಮಿ ಮುಂದಿಲ್ಲಾ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 609.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 251.
3. **Note:** This song is not available in Shri Betageri Krishna Sharma and Shri Bengeri Huchha Rayaru books.
4. **Note:** Lyrics given here are as per Ref. 1. The wordings in Ref. 2 are slightly different and are not considered here.
5. **Note:** Singer has followed these lyrics.

ರಾಗ: ಪಂತುವರಾಳಿ ತಾಳ: ಅಟ

ಹಿಂದಿಲ್ಲಾ ಸ್ವಾಮಿ ಮುಂದಿಲ್ಲಾ, ಗೋ-
ವಿಂದ ನೀನಲ್ಲದೆ ಇಹಪರವಿಲ್ಲ || ಪ ||

ಪರರ ಬೇಡಿಪ್ಪಂತೆ ಗತಿಯಾಯಿತಲ್ಲ
ನರರ ತುತಿಸಿ ನಾಲಿಗೆ ಬರಡಾಯಿತಲ್ಲ
ಪರವಿಲ್ಲ ಇಹವಿಲ್ಲ ನರಜನ್ಮ ಸ್ಥಿರವಲ್ಲ
ನರಗೆ ಪಾಮರಗೆ ಪಾಪದ ಪಂಜರಗೆ || 1 ||

ತನುವು ತನ್ನದಲ್ಲ ತನ್ನವರು ತನಗಿಲ್ಲ
ಅನುಕೂಲವಿರುವಾಗ ಸತಿ ಸುತರೆಲ್ಲ
ಅನುವು ತಪ್ಪಿ ಮನವು ತಲ್ಲಣಿಸುವಾಗ
ವನಜನಾಭ ನೀನಲ್ಲದೆ ಯಾರಿಲ್ಲ || 2 ||

ಮಾತಾಪಿತೃ ಬಂಧುಗಳು ಮುಂತಾಗಿ ಸಂ-
ಪ್ರೀತಿಯೊಳಿರಲು ಮನ್ನಿಪರ್‍ಯೆ ಎಲ್ಲ
ಕಾತರನಾಗಿ ಯಮ ಕೊಂಡೊಯ್ಯುವಾಗ ಸಂ-
ಗಾತ ಇನ್ನ್ಯಾರಯ್ಯ ಪುರಂದರ ವಿಠಲ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಹಿಂದಿಲ್ಲ ಮುಂದಿಲ್ಲ –** 'ಹಿಂದೆ' ಎಂದರೆ ಪೂರ್ವ ಜನ್ಮಗಳಲ್ಲಿ ನಡೆಸಿದ ಪುಣ್ಯ ಕರ್ಮ, ಪಡೆದುಕೊಂಡ ಜ್ಞಾನ, ಮಾಡಿದ ಭಕ್ತಿ; 'ಮುಂದೆ' ಎಂದರೆ ಸದ್ಗತಿ, ಮುಕ್ತಿಗೆ ಕಾರಣವಾಗುವ ದಾರಿ.

**ಇಹಪರವಿಲ್ಲ–** 'ಇಹ'ವೆಂದರೆ ಸಂಸಾರದಲ್ಲಿ ಅಭ್ಯುದಯ; ಪುಣ್ಯದಿಂದ ಬರುವಂಥದು; 'ಪರ'ವೆಂದರೆ ಮುಕ್ತಿ, ನಿಃಶ್ರೇಯಸ, ಜ್ಞಾನದಿಂದ ಬರುವಂಥದು.

**ತುತಿಸಿ –** ಸ್ತುತಿಸಿ, ಹೊಗಳಿ.

**ಗೋತ್ರಜರು –** ನಂಟರು.

**ಸಂಗಾತ –** ಜೊತೆಯಲ್ಲಿ

**Classification:** Keerthane
**Ankita:** purandara vittala
**Location:** NA
**Category:** Jeevana Sambodhane
**Sub-Category:** govinda, nalige, mukti, samsara, nara, janma, papa, punya, karma, jnana, bhakti, deha, patni, makkalu, mana, rokka, tayi, tande, yama, preeti, bandhu,
**Pravachana:** NA
**Explanation:** NA